


ರಾಮಮನೋಹರ ಲೋಹಿಯಾ
ಜೀವನಯಾನ

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ಸ್ವಾತಂತ್ರ್ಯದ ಹೊಸ ಗಾಳಿ, ಕೋಮು ವಿಭಜನೆಯ ವಿಷ ಗಾಳಿ

ತಮ್ಮ ವಿಚಾರಣೆ, ಬಿಡುಗಡೆಗಳ ನಿರೀಕ್ಷೆಯನ್ನೇ ಕೈಬಿಟ್ಟಂತಿದ್ದ ಲೋಹಿಯಾ ಆಗ್ರಾ ಜೈಲಿನಲ್ಲಿ ನಿಧಿಯಂತೆ ದೊರೆತ ಪುಸ್ತಕ, ಪೆನ್ನು, ಪೇಪರುಗಳು, ಓದು, ಬರವಣಿಗೆಗಳಲ್ಲಿ ಮುಳುಗಿದ್ದು ಅಚ್ಚರಿಯಲ್ಲ.

ಮಹಾಯುದ್ಧದ ಪರಿಣಾಮಗಳು ಹಾಗೂ ಭಾರತಕ್ಕೆ ಅಧಿಕಾರ ಹಸ್ತಾಂತರದ ಕ್ಷಿಪ್ರ ಬೆಳವಣಿಗೆಗಳ ನಡುವೆ ಲೋಹಿಯಾ, ಜೆ.ಪಿ. 11 ಏಪ್ರಿಲ್ 1946ರಂದು ಆಗ್ರಾ ಜೈಲಿನಿಂದ ಬಿಡುಗಡೆಯಾದರು. ಜೈಲಿನ ಹೊರಗೆ ಜನ ದೊಡ್ಡ ಸಂಖ್ಯೆಯಲ್ಲಿ ಕಾಯುತ್ತಿದ್ದರು. ಭಾವುಕ ವಾತಾವರಣ. ಜನ ಹಾರ ಹಾಕಲು ಬಂದಾಗ ಲೋಹಿಯಾ ಒಲ್ಲೆನೆಂದರು. ಸ್ವಾಗತ ಸಭೆಗೆ ಧನ್ಯವಾದ ಹೇಳಿದ ಲೋಹಿಯಾ, 'ಹೊರಗಿನ ವಿದ್ಯಮಾನಗಳು ಸರಿಯಾಗಿ ತಿಳಿಯದೇ ಇರುವುದರಿಂದ ರಾಜಕೀಯ ವಿದ್ಯಮಾನಗಳ ಬಗ್ಗೆ ಏನನ್ನೂ ಹೇಳಲಾರೆ' ಎಂದರು.

ಜೆ.ಪಿ. ಪಾಟ್ನಾಕ್ಕೆ ಹೊರಟರು. ಲೋಹಿಯಾ ಕಲ್ಕತ್ತಾಕ್ಕೆ ಹೊರಟರು. ಕಲ್ಕತ್ತದ ರೈಲ್ವೇ ಪ್ಲಾಟ್‌ಫಾರ್ಮ್‌ನಲ್ಲಿ ಕಿಕ್ಕಿರಿದಿದ್ದ ಜನ ಹೀರಾಲಾಲರ ಆತ್ಮಕ್ಕೆ ಶಾಂತಿ ಕೋರಿ ಮೌನ ಆಚರಿಸಿ ಲೋಹಿಯಾರನ್ನು ಬರಮಾಡಿಕೊಂಡರು.

ಲೋಹಿಯಾ, ಜೆ.ಪಿ. ಬಿಡುಗಡೆಯ ಜೊತೆಗೇ ಸುಭಾಷ್‌ಚಂದ್ರ ಬೋಸ್ ಕಟ್ಟಿದ್ದ 'ಇಂಡಿಯನ್ ನ್ಯಾಷನಲ್ ಆರ್ಮಿ'ಯ ಸೆರೆಯಾಳು ಯೋಧರೂ ಬಿಡುಗಡೆಯಾಗಿದ್ದನ್ನು ಕಂಡು ಗಾಂಧೀಜಿಗೆ ನಿರಾಳವಾಗಿತ್ತು. ಲೋಹಿಯಾ ಬಗ್ಗೆ ಗಾಂಧೀಜಿಗೆ ವಿಶೇಷ ಮಮತೆಯೂ ಹುಟ್ಟಿತ್ತು. ಗಾಂಧೀಜಿ ಬರೆದ 17 ಏಪ್ರಿಲ್ 1946ರ ಪತ್ರ 'ಭಾಯಿ ರಾಮ್ ಮನೋಹರ್' ಎಂದು ಶುರುವಾಗಿತ್ತು; 'ನೀನು ದೆಹಲಿಯಲ್ಲಿ ನನ್ನನ್ನು ಕಂಡು ಹೋಗುತ್ತೀಯ ಎಂದುಕೊಂಡಿದ್ದೆ' ಎಂದು ಬರೆದಿದ್ದ ಗಾಂಧೀಜಿ, ಆಶೀರ್ವಾದಗಳು, 'ಬಾಪು' ಎಂದು ಸಹಿ ಮಾಡಿದ್ದರು. ತಮಗೆ ಪ್ರಿಯರಾದವರಿಗೆ ಪತ್ರ ಬರೆದಾಗ ಗಾಂಧೀಜಿ ಹೀಗೆ ಸಹಿ ಹಾಕುತ್ತಿದ್ದರು.

ಗಾಂಧೀಜಿ ಪತ್ರ ಬರೆದ ದಿನವೇ ನೆಹರು ಕೂಡ

